ಆರಕ್ಕೇರದ, ಮೂರಕ್ಕಿಳಿಯದಂತಾಗಿದ್ದವು. ಕೂಲಿ-ಜೀತ ಇವೇ ಇವರ ಕಾಯಕ. ಅಂಬವ್ವ ಗಂಡನಿಗೆ ಬುದ್ಧಿವಾದ ಹೇಳಿ ಮಗನಿಗೆ ಸಾಲಿಗೆ ಹಾಕಿ ಕಷ್ಟ ಪಟ್ಟು ಓದಿಸಿದಳು. ಪ್ರಕಾಶ ಊರಿಗೆ ಬೆಳಕಾಗಿ ನಿಂತಾನ. ಭಾಳ ಓದ್ಯಾನಂತ ಊರವರೆಲ್ಲ ಮಾತಾಡೊದು ರೇವಣವ್ವ ಕೇಳಿ ತಿಳಿದಿದ್ದಳು.

ಸೂರ್ಯ ನೆತ್ತಿ ಮೇಲೆ ಬಂದಿದ್ದರಿಂದ ಬಿಸಿಲು ಏರಿತ್ತು. ರೇವಣವ್ವ ನೆಲ ಬರಿಯುತ್ತ ಗುಡಿಸಿಲು ನೆರಳಿಗೆ ಕೂತಿದ್ದಳು. ಅಡವಿಯಿಂದ ಅಂಬವ್ವ ಬೇಗನ ಬರೂದು ಕಾಣಿಸಿತು. 'ಏನವಾ ಅಂಬವ್ವ ಮಗಾ ಬರತಾನಂತ ಜಲ್ದಿನ ಹೊಳ್ಳಿ ಬಂದಿಯೇನ' ಎಂದು ರೇವಣವ್ವ ಮಾತು ಬೆಳಿಸಿದಳು.

'ಹೌದ ಚಿಕ್ಕತ್ತಿ. ನಿಮ್ಮ ಮಗಾ ಕೂಲಿ-ನಾಲಿ ಮಾಡಿ, ಮಂದಿ ಬೈಗುಳ ಮಾತುಗಳು ಕೇಳಿಸಿಕೊಂಡು ಮಗನಿಗಿ ಇಲ್ಲಿತನಕಾ ಓದಸ್ಯಾನ, ನೌಕರಿಗೆ ಇಂಟರ್‌ವ್ಯೂ ಬಂದದಂತ. ಅದಕ್ಕ ಅಪ್ಪ-ಅವ್ವನ ಕಾಲಬಿದ್ದು ಹಿರಿಯರ ಆಶೀರ್ವಾದ ತಗೋಬೇಕು ಅಂತ ಹೊಂಟಾನ, ಇನ್ನೇನು ಬರ್‍ತಾನ, ಅದಕ್ಕ ಜಲ್ದಿ ಬಂದಿನೆವ್ವ' ಅನ್ನುತ್ತ, 'ಇನ್ನೇನು ನ್ಯಾರಿ ಮುಗದ ಮ್ಯಾಲ ನಿಮ್ಮ ಮಗಾನು ಬರ್‍ತಾನ'ಎಂದು ಅಂಬವ್ವ ವರದಿ ಒಪ್ಪಿಸಿದಳು.

'ನೋಡವಾ ನೀನು-ನಿನ್ನ ಗಂಡ ಜಿದ್ದಿ ಇದ್ದೀರಿ. ಯಾರ ಮಾತಿಗೂ ಕಿವಿಗೊಡಲಿಲ್ಲ; ಮಕ್ಕಳಿಗಿ ಜೀತಾ ಇಡಲಿಲ್ಲ! ನಮ್ಮೂ ಅದಾವ ನೋಡು. ಜೀತಕ್ಕ ಇಡೊದೊಂದು ಬಿಟ್ರ ಏನೂ ಮಾಡಲಿಲ್ಲ' ಎಂದು ರೇವಣವ್ವ ಬೇಸರ ಮಾಡಿಕೊಂಡಳು. ಅಷ್ಟರಲ್ಲಿ ಬಸ್ಸಿನ ಸದ್ದಾತು. ಅಂಬವ್ವ ಬಸ್ ನಿಲ್ದಾಣದ ಕಡೆ ದೃಷ್ಟಿ ನೆಟ್ಟಳು. ಗಳಿಗ್ಹೊತ್ತು ಕಳೆಯಲಿಲ್ಲ, ಪ್ರಕಾಶ ಬಸ್ಸಿಳಿದು ಕೇರಿ ಕಡೆಗೆ ಬರುವುದು ಕಂಡಿತು. ನೀಳಕಾಯ, ತಾಯಿ ತಂದಿಯಂಗ ಬೆಳ್ಳಗ, ನೆಟ್ಟಗ ಮೂಗು. ನೋಡಿದವರಿಗೆಲ್ಲ ಬ್ರಾಹ್ಮಣ ಕಂಡಾಂಗ ಕಾಣತ್ತಿದ್ದ. ಪ್ರಕಾಶ ಬರುತ್ತಿದ್ದಂತೆ ಕೇರಿಯ ಎಲ್ಲರೂ ಹೊರಬಂದು ಮಾತಾಡಿಸಿದರು. ರೇವಣವ್ವ ಇದೆಲ್ಲವನ್ನು ಗಮನಿಸುತ್ತಿದ್ದಳು.

'ಚಿಕ್ಕಜ್ಜಿ ಹೇಗಿದ್ದೀರಿ' ಎಂದು ಕೇಳುತ್ತ ಪ್ರಕಾಶ ಕಾಲಿಗೆ ನಮಸ್ಕಾರ ಮಾಡಿದ. ತನ್ನ ತಾಯಿ ಅಂಬವ್ವಗೂ ನಮಸ್ಕರಿಸಿದ. ಮಗನಿಗೆ ಅಂಬವ್ವ ಮುದ್ದಿಸಿ ಪ್ರೀತಿಸಿದಳು. ಮಗನ ಕೈಯಿಂದ ಬ್ಯಾಗ ತಗೊಂಡು, ಬೇಗ ಬಾರಪಾ ಎಂದು ಅಂಬವ್ವ ಮನೆಕಡೆ ಮುಖ ಮಾಡಿದಳು. ಮನಸ್ಸಿಲ್ಲದ ಮನಸ್ಸಿನಿಂದ ಲಗಸೆವ್ವ, 'ಹೇಗಿದ್ದಿಯಪ್ಪಾ! ನಿನ್ನಂಗ ನಮ್ಮ ಮಗಾನು ಓದಿದ್ರ ಹಿಂಗ ಇರ್‍ತಿದ್ದ' ಎಂದು ಉಸುರಿದಳು.

'ನೀವು ಬಿಟ್ರ ಇರ್‍ತಿದ್ದ' ಎಂದು ರೇವಣವ್ವ ಮಾತಿನ ಮೂಲಕ ತಿವಿದಳು.

'ಅಲ್ಲ ಮಗಾ, ನೀನು ತುರುಕರ ಭಾಷೆ ಕಲಿತಿಯಂತ, ಅದನ ಮಾತಾಡ್ತಿಯಂತ' ಎಂದು ರೇವಣವ್ವ ಬಾಯಿ ಮೇಲೆ ಬೆರಳಿಟ್ಟುಕೊಂಡು ಆಶ್ಚರ್ಯದಿಂದ ಕೇಳಿದಳು.

'ಅಜ್ಜಿ ಹೊಲದಲ್ಲಿ ಎಲ್ಲರೂ ಒಂದೇ ಬೆಳಿ ಬೆಳದರ ನಂಬಿದಷ್ಟು ಹಣ ಬರಾಂಗಿಲ್ಲ ಅನ್ನೂದು ನಿನಗ ಗೊತ್ತದಲ್ಲ, ಹಂಗ ಎಲ್ಲರೂ ಓದಿದ್ದೇ ಓದಿದರ ಕಿಮ್ಮತ್ತ ಇರಾಂಗಿಲ್ಲ. ಅದಕ್ಕ ನಾನು ಉರ್ದು ಓದಿದ್ದೀನಿ, ನೌಕರಿನೂ ಜಲ್ದಿ ಸಿಗ್ತದ. ಆ ವಿಷಯದಾಗ ಪರಿಣಿತಿ ಪಡೆದ ನಮ್ಮ ಕುಲದವರು ಭಾಳ ಕಡಮಿ ಇರ್‍ತಾರ. ಅದಕ ನನಗ ಇಂಟರ್‌ವ್ಯೂವ್‌ಗೆ ಕರದಾರ, ನೌಕರಿ ಗ್ಯಾರಂಟಿ' ಎಂದು ಪ್ರಕಾಶ ಎಲ್ಲವನ್ನು ವಿವರಿಸಿದ.

'ಹೌದಾ ಮೊಮ್ಮಗನೇ, ಇವೆಲ್ಲ ನಮಗ್ಯಾಂಗ್ ಗೊತ್ತಾಗಬೇಕು. ನಿಮ್ಮ ಕಾಕಾನೂ ಓದಲಿಲ್ಲ. ನಿನ್ನ ವಾರಿಗಿ ತಮ್ಮನೂ ಓದಲಿಲ್ಲ. ಇರ್‍ಲಿ ಮಗಾ, ಹೋಗು ಜಳಕಾ-ಗಿಳಕಾ ಮಾಡು. ನಿಮ್ಮಪ್ಪ ಇನ್ನೇನು ಬರ್‍ತಾನ ಹೋಗು ಹೋಗು' ಎಂದು ರೇವಣವ್ವ ಒತ್ತಾಯಿಸಿದಳು. ಬರ್‍ತಿನಿ ಚಿಕ್ಕಜ್ಜಿ ಎನ್ನುತ್ತ ಎಲ್ಲರನ್ನು ಅವ್ವ-ಚಿಗವ್ವ, ಅಕ್ಕ-ತಂಗಿದೆರನ್ನು ಮಾತಾಡಿಸುತ್ತ ಮನೆಗೆ ತೆರಳಿದ.

'ಮಗಾ ದೂರದ ದಾರಿ, ದಣದೀದಿ ಬಚ್ಚಲದಾಗ ನೀರಿಳಿಸಿನಿ ಬಿಸಿ ಅದಾವ. ಹದವಾಗಿ ನೀರು ಬೆರಿಸಿಕೊಂಡು ಜಳಕಾ ಮಾಡು. ನಾಲ್ಕು ಬಿಸಿರೊಟ್ಟಿ ಮಾಡ್ತಿನಿ ಉಣ್ಣುವಂತೆ' ಎಂದು ಅಂಬವ್ವ ಮಗನಿಗೆ ಹೇಳಿದಳು.

'ಅಪ್ಪನೂ ಬರ್‍ಲೆಮ್ಮ' ಎಂದು ಹೇಳಿದ.

'ಆಯಿತಪಾ ನೀನ್ಯಾವಾಗ ನಿನ್ನಪ್ಪನ ಬಿಟ್ಟು ಊಟ ಮಾಡಿದಿ. ಇಲ್ಲಿ ಬಂದಾಗ ಅಪ್ಪನೊಂದಿಗಿ ಊಣ್ತಿ ಅಲ್ಲಿದ್ದಾಗೇನ ಮಾಡ್ತಿ' ಎಂದು ಅಂಬವ್ವ ಮಗನಿಗೆ ಕೇಳಿದಳು.

'ಅಲ್ಲಿದ್ದಾಗ ನಿಮ್ಮಿಬ್ಬರನ್ನು, ಬೋಧಿಸತ್ವರ ನೆನೆದು ಉಣ್ತೇನಿ' ಎಂದು ತಾಯಿಗೆ ಹೇಳಿದ.

'ಅಯ್ಯಪಾ ನಿನಗ ನಾನೇನ ಹೇಳೂದದ...ಎಲ್ಲಾ ನಿಮ್ಮಜ್ಜಿ ತರಾನೇ ಅರಳ ಹುರದಂಗ್ ಮಾತಾಡ್ತಿ